ಈಗಾಗಲೇ ಪರಸ್ಪರ ಪ್ರೀತಿಸಿದ್ದಾರೆ. ನಳನಿಗೇ ತನ್ನ ವರಣಮಾಲೆಯೆಂದು ದಮಯಂತಿ ದೃಢನಿಶ್ಚಯ ಕೈಗೊಂಡಿದ್ದಾಗಿದೆ. ಆದರೆ, ಅವಳ ಆಯ್ಕೆಗೆ ಅಡ್ಡಿ ಬರುವುದು ಯಾವುದೇ ನರಮಾನವರಲ್ಲ, ಸ್ವತಃ ಸರ್ವಶಕ್ತರಾದ ದೇವತೆಯರು. ಇಂದ್ರ, ವರುಣ, ಅಗ್ನಿ ಮತ್ತು ಯಮ ಆ ಲಾವಣ್ಯವತಿಗೆ ಮನ ಸೋತು, ತಮ್ಮಲ್ಲೇ ಒಬ್ಬನನ್ನು ವರಿಸಲು, ಸ್ವತಃ ನಳನ ಮೂಲಕವೇ ಗುಟ್ಟಾಗಿ ಅವಳ ಮೇಲೆ ಒತ್ತಾಯ ತರುತ್ತಾರೆ. ಆದರೆ, ದಮಯಂತಿ ದೇವತೆಗಳ ಯಾವುದೇ ಆಮಿಷಕ್ಕೂ ಆಗ್ರಹಕ್ಕೂ ತನ್ನ ಪ್ರೀತಿಯನ್ನು ಬಲಿ ಕೊಡಲು ನಿರಾಕರಿಸುತ್ತಾಳೆ. ಅವಳನ್ನು ಯಾಮಾರಿಸಲೆಂದು ಕಾಮರೂಪಿಗಳಾದ ಅವರು ಸ್ವಯಂವರದಲ್ಲಿ ನಳನ ಮಾರುವೇಷದಲ್ಲಿ ಅವನ ಪಕ್ಕದಲ್ಲೇ ಉಪಸ್ಥಿತರಾಗುತ್ತಾರೆ. ಈಗ ಒಬ್ಬನಲ್ಲ, ಇಬ್ಬರಲ್ಲ, ಐದು ಮಂದಿ ತದ್ರೂಪಿ ನಳರು! ಆದರೆ, ದಮಯಂತಿ ನಿಜಕ್ಕೂ ಜಾಣೆ. ಅವಳಿಗೆ ಸಾಮಾನ್ಯಜ್ಞಾನವಿದೆ. ದೇವತೆಗಳಿಗೂ ಮನುಷ್ಯರಿಗೂ ಇರುವ ಭೌತಿಕ ವ್ಯತ್ಯಾಸಗಳು ಅವಳಿಗೆ ಗೊತ್ತಿವೆ. ಮನುಷ್ಯರಂತೆ ದೇವತೆಗಳು ಕಣ್ಣು ಮಿಟುಕಿಸುವುದಿಲ್ಲ, ಬೆವರುವುದಿಲ್ಲ, ಅವರ ಪಾದಗಳು ನೆಲಕ್ಕೆ ತಾಕುವುದಿಲ್ಲ, ಅವರು ತೊಟ್ಟ ಹೂಹಾರಗಳು ಬಾಡುವುದಿಲ್ಲ. ಈ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದ ದಮಯಂತಿ ನಿಜವಾದ ನಳನಿಗೆ, ನರನಿಗೆ, ತನ್ನ ಪ್ರಿಯಕರನಿಗೆ ಹಾರ ತೊಡಿಸಿ, ವರಿಸುತ್ತಾಳೆ. ತನ್ನ ಪ್ರೇಮನಿಷ್ಠೆಯನ್ನು, ಹಾಗೆಯೇ ಜನ್ಮಜಾತ ಜಾಣ್ಮೆಯನ್ನು ಸಾಬೀತು ಪಡಿಸುತ್ತಾಳೆ.

ಈ ಪೌರಾಣಿಕ ಕಥೆಯನ್ನೇ ಒಂದು ರೂಪಕವಾಗಿ ಬಳಸಿಕೊಂಡು, 1991ರಲ್ಲಿ ನಡೆದ ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ನಾನು 'ಸ್ವಯಂವರ' ಎಂಬ ಕವಿತೆಯನ್ನು ಬರೆದು ಪ್ರಕಟಿಸಿದೆ. ಅದರಲ್ಲಿ ಭಾರತದ ಮತದಾರರೇ ದಮಯಂತಿ. ಅವರು ತಮ್ಮ ಸಾಮಾನ್ಯಜ್ಞಾನವನ್ನು ಬಳಸಿಕೊಂಡು, ಜನವಿಮುಖರಾಗಿ ಮೆರೆಯುತ್ತಿರುವ ಕ್ಷುದ್ರದೇವತೆಗಳಂತಹ ಖಳನಾಯಕರನ್ನು ತಿರಸ್ಕರಿಸಿ, ತಮ್ಮ ಹಿತಚಿಂತಕನಾದ ನಿಜವಾದ ನಳನನ್ನು, ನರನನ್ನು ಆರಿಸಿಕೊಳ್ಳಬೇಕು ಎಂಬ ಇಂಗಿತಾರ್ಥವನ್ನು ವ್ಯಕ್ತಪಡಿಸಿದ್ದೆ. ಆ ಕವಿತೆಯ ಪೂರ್ಣಪಾಠ ಹೀಗಿದೆ:

## ಸ್ವಯಂವರ

ದೇವತೆಗಳನ್ನು ಪತ್ತೆ ಹಚ್ಚುವುದು
ಹೇಗಂತೀಯಾ, ದಮಯಂತಿ?
ಗಮನಿಸು:

ಬೆವರುವುದಿಲ್ಲ
ಇವರ ಮೈಮುಖ
ಸುಖ ಶೀತೋಷ್ಣ ಮಹಲುಗಳಲ್ಲಿ.

ತಾಕುವುದಿಲ್ಲ
ಇವರ ಪಾದಗಳು
ಕ್ಷುದ್ರ ದರಿದ್ರ ನೆಲವನ್ನು;
ಹಾದಿಯುದ್ದಕ್ಕೂ ರತ್ನಗಂಬಳಿ.

ಬಾಡುವುದಿಲ್ಲ
ಇವರ ಹೂ–
ನಗೆ
ಎಂಥ ದುರಂತದ ಬಗೆಗೂ,
ಯಾವ ಬಡಬಾಗ್ನಿ ಧಗೆಗೂ.

ಇಕ್ಕುವುದಿಲ್ಲ
ಇವರ ಕಂಗಳು
ಅರೆಕ್ಷಣವೂ ಸಹ
ಎವೆ;
ತಮ್ಮ ತಮ್ಮ ಸಿಂಹಾಸನಗಳನ್ನು
ಕಾವಲು ಕಾಯುತ್ತವೆ.

ದೇವತೆಗಳು
ಇವರು.

ಇನ್ನು
ನಿನ್ನ ನಿಜವಾದ ನಳನನ್ನು
ನರನನ್ನು
ಪ್ರಿಯಕರನನ್ನು
ಬಾ, ಗುರುತಿಸು,
ವರಿಸು.